P.w.1

**<u>ಸಾಕ್ಷಿಯನ್ನು ದಿನಾಂಕಃ 29.03.2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರ ಪರ ವಕೀಲರವರಿಂದಃ</u>**

ನನಗೆ ಮೂವರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ಆ ಪೈಕಿ ಒಬ್ಬ ಮಗ ಮೃತಪಟ್ಟಿರುವರು. ನಾನು ಎದುರುದಾರನ ಮನೆಯಲ್ಲಿ ಒಂದು ರೂಮಿನಲ್ಲಿ ವಾಸವಿದ್ದೇನೆ. ಎದುರುದಾರನು ನನ್ನ ಯೋಗ ಕ್ಷೇಮವನ್ನು ನೋಡಿಕೊಳ್ಳುವನು ಎಂದರೆ ಸರಿಯಲ್ಲ. ಹೆಣ್ಣು ಮಕ್ಕಳು ನನ್ನೊಂದಿಗೆ ವಿಶ್ವಾಸದಿಂದ ಇರುವರು ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಹೆಣ್ಣು ಮಕ್ಕಳು ಸೇರಿಕೊಂಡು ಒಂದು ಪಾಲು ದಾವೆಯನ್ನು ಓ ಎಸ್ ನಂ.151/2023 ರಂತೆ ಸಲ್ಲಿಸಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ನಾನು ಹೆಣ್ಣು ಮಕ್ಕಳ ಮಾತನ್ನು ಕೇಳಿಕೊಂಡು ಈ ಅರ್ಜಿಯನ್ನು ಮತ್ತು ಸದರಿ ದಾವೆಯನ್ನು ಎದುರುದಾರನಿಗೆ ಕಿರುಕುಳ ಕೊಡುವ ಸಲುವಾಗಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಆಸ್ಪತ್ರೆಯ ಖರ್ಚು ಮತ್ತು ಊಟ ಉಪಚಾರದ ಖರ್ಚನ್ನು ಎದುರುದಾರನು ನೋಡಿಕೊಳ್ಳುತ್ತಿರುವನು ಎಂದರೆ ಸರಿಯಲ್ಲ.

ನನಗೆ ಜಿ.ಹಾಲೇಶ್ ತಂದೆ ಮರುಳ ಸಿದ್ದಪ್ಪರವರ ಪರಿಚಯ ಇರುವರು. ಅವರು ನಮ್ಮ ಊರಿನವರು. ಅವರಿಗೆ ನಾನು ಗುತ್ತಿಗೆಗೆ ಒಂದು ಜಮೀನನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಗುತ್ತಿಗೆ ಹಣವನ್ನು ನಾನು ಪಡೆದುಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ. 171/ಎ 3 ಎಕರೆ 2 ಸೆಂಟ್ಸನ್ನು ಎದುರುದಾರ ಸಾಗುವಳಿ ಮಾಡುತ್ತಿರುವನು.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ. ಹೇ ಕೇ ಸರಿಯಿದೆ.**

29.03.2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**

P.w.1